(ಇಂದು ದಿನಾಂಕ 22-11-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ವಾದಿ ಪರ ಶ್ರೀ ಪಿ.ಜಿ.ಎಚ್. ವಕೀಲರಿಂದ-**

ನಾನು ಕಳೆದ 3 ವರ್ಷಗಳಿಂದ 3 ನೇ ಪ್ರತಿವಾದಿಯವರ ಸಂಸ್ಥೆಯ ಸ್ಕ್ರೆಟರಿಯಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ. ಈ ದಾವೆಯಲ್ಲಿ ಉದಾಹರಣೆಯನ್ನು ಸಲ್ಲಿಸಲು ವಕೀಲರಿಗೆ 3 ನೇ ಪ್ರತಿವಾದಿಯ ಸಂಸ್ಥೆಯ ಕಾರ್ಯದರ್ಶಿಗಳು ಮಾಹಿತಿಯನ್ನು ನೀಡಿರುತ್ತಾರೆ. ನನ್ನ ಪೂರ್ವದಲ್ಲಿ ನಾರಾಯಣ ಸಣ್ಣ ಮೂಡಂಗಿ ಇವರು ನಿವೃತ್ತಿಯಾದ ನಂತರ ಈಶ್ವರ ಹೊಸಬಾ ಮೂಡಂಗಿ ನಂತರ ಪ್ರಭಾರಿಯಾಗಿ ಸುಮನಾ ರಾಮಚಂದ್ರ ಹರಿಕಂತ್ರ ಇವರು ಕರ್ತವ್ಯನಿರ್ವಹಿಸಿರುತ್ತಾರೆ.

3 ನೇ ಪ್ರತಿವಾದಿಯ ಸಂಸ್ಥೆಯ ಕಾರ್ಯಕ್ಷೇತ್ರವು ಅಘನಾಶಿನಿಯಿಂದ ಮೊರಬಾವರೆಗೆ ವಿಸ್ತರಿಸಿರುತ್ತದೆ. 3 ನೇ ಪ್ರತಿವಾದಿಯ ಸಂಸ್ಥೆಯು ಸಂಘದ ಸದಸ್ಯರಿಗೆ ಸಾಲವನ್ನು ನೀಡುತ್ತದೆ ಎಂದರೆ ಸರಿ. ದಾವಾಸ್ತಿಯು ನಮ್ಮ ಸಂಸ್ಥೆಗೆ ಸೇರಿದ ಜಮೀನಾಗಿರುವುದಿಲ್ಲ ಎಂದರೆ ಸರಿ. ವಾದಿ ಹಾಗೂ ಅವರ ಕುಟುಂಬದವರು ಮೂಲತಃ ಮೀನುಗಾರರು ಎಂದರೆ ಸರಿ. ವಾದಿ ಹಾಗೂ ಅವರ ಕುಟುಂಬದವರು ಅನುವಂಶಿಕವಾಗಿ ಮೀನುಗಾರಿಕಾ ವೃತ್ತಿಯನ್ನು ನಡೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ವಾದಿ ಹಾಗೂ ಅವರ ಕುಟುಂಬದವರು ಅನಾದಿ ಕಾಲದಿಂದಲೂ ಮೀನುಗಾರಿಕಾ ವೃತ್ತಿಯನ್ನು ನಡೆಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

ದಾವಾಸ್ತಿಯು ಕರ್ನಾಟಕ ಸರಕಾರದ ಸ್ವಾಮಿತ್ವಕ್ಕೆ ಒಪ್ಪಿದ ಆಸ್ತಿ ಎಂದರೆ ಸರಿ. ಅಘನಾಶಿನಿ ನದಿಯ ಇಕ್ಕೆಲಗಳಲ್ಲಿ ವಾಸಿಸುವ ಜನರು ಬಲೆ ಹಾಕಿ ಮೀನನ್ನು ಹಿಡಿಯುತ್ತಾರೆ ಎಂದರೆ ಸರಿ. ಅಘನಾಶಿನಿ ನದಿಯ ಇಕ್ಕೆಲಗಳಲ್ಲಿ ಯಾವ ರೀತಿ ಮೀನುಗಾರಿಕೆ ನಡೆಸಬೇಕು ಎಂದು ಕರ್ನಾಟಕ ಸರಕಾರದವರು ಕಾಲಕಾಲಕ್ಕೆ ಅಧಿಸೂಚನೆಯನ್ನು ಹೊರಡಿಸುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಕರ್ನಾಟಕ ಸರಕಾರದವರು ಕುಮಟಾ ತಾಲೂಕಿನ ಬೆಟ್ಕುಳಿ ಬರ್ಗಿ ಗಜನಿಗೆ ಕಾರ್ಲ್ಯಾಂಡನ್ನು ಕಟ್ಟಿರುತ್ತಾರೆ ಎಂದರೆ ಸರಿ. ಬೆಟ್ಕುಳಿ ಬರ್ಗಿ ಗಜನಿಗೆ ನದಿಯಲ್ಲಿ ದೋಣಿಗಳು ಓಡಾಡುತ್ತವೆ ಎಂದರೆ ಸರಿ. ಕರ್ನಾಟಕ ಸರಕಾರದವರು ಬೆಟ್ಕುಳಿ ಬರ್ಗಿ ಗಜನಿಗೆ ಮೀನುಗಾರಿಕೆ ನಡೆಸುವ ಕುರಿತು ನಮ್ಮ 3 ನೇ ಪ್ರತಿವಾದಿಯ ಸಂಸ್ಥೆಯವರಿಗೆ ಯಾವುದೇ ಅಧಿಕಾರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಕರ್ನಾಟಕ ಸರಕಾರದವರು ನಮಗೆ ಅಧಿಕಾರವನ್ನು ನೀಡಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ.

ಮೀನು ಹಿಡಿಯುವವರು ನದಿಯಲ್ಲಿ ಬಲೆಯನ್ನು ಹಾಕಿ ಹಾಗೂ ಬಲೆಯನ್ನು ಕಟ್ಟಿಕೊಂಡು ಮೀನು ಹಿಡಿಯುತ್ತಾರೆ ಎಂದರೆ ಸರಿ. ನದಿಯಲ್ಲಿ ಬಲೆಯನ್ನು ಕಟ್ಟಿಕೊಂಡು ಮೀನು ಹಿಡಿಯುವವರು ದೋಣಿ ಸಾಗಲು ತೊಂದರೆಯಾಗದಂತೆ ಗುಟ್ಟಗಳನ್ನು ಹುಗಿದು ಮೀನು ಹಿಡಿಯುತ್ತಾರೆ ಎಂದರೆ ಸರಿ. ಸನ್ 1979 ನೇ ಇಸವಿಯಲ್ಲಿ ಬಂದರು ಇಲಾಖೆಯವರು ಮೀನುಗಾರಿಕೆ ನಡೆಸಬಾರದು ಎಂದು ತಾಕೀತು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ಬಂದರು ಇಲಾಖೆಯವರು ಮೀನುಗಾರರಿಗೆ ಮೀನು ಹಿಡಿಯಲು ಪರವಾನಿಗೆಯನ್ನು ನೀಡುವುದಾಗಿ ಹೇಳಿರುತ್ತಾರೆ ಎಂದರೆ ಸರಿ. ಬಂದರು ಇಲಾಖೆಯವರು ನದಿಪಾತ್ರದ ಮೀನುಗಾರರಿಗೆ ಮೀನುಗಾರಿಕೆ ನಡೆಸಲು ಪರವಾನಿಗೆ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ